

ಚಿತ್ರ: ಮಂಜುನಾಥ್ ಹುಲಿಕೊಪ್ಪದ

# ರಾಕೆಟ್ಟಿನ ವೇಗ ಇದ್ರೆ

■ ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

ರಾಕೆಟ್ಟಿನ ವೇಗ ನನಗಿದ್ರೆ ಚಂದೂ
ನಿನ್ನ ಬಳಿಗೆ ಹಾರಿ ಬರ್ತಿದ್ದೆ!
ಭೂಮಿಯಿಂದ ಕೊಳವೆ ಜೋಡಿಸಿ
ಆಮ್ಲಜನಕ ಅಲ್ಲಿಗೆ ತರ್ತಿದ್ದೆ
ಬೆಣ್ಣೆ ಮುದ್ದೆ, ಜೇನು ತುಪ್ಪವ
ನಿನಗೂ ಸವಿಯಲು ಕೊಡ್ತಿದ್ದೆ
ಪಿಜ್ಜಾ, ಬರ್ಗರ್ ಎಲ್ಲವ ಬಿಟ್ಟು
ಹಾಲನು ಕುಡಿದು ಕುಣಿತಿದ್ದೆ
ಕನ್ನಡ ಅಕ್ಷರ ನಿನಗೂ ಕಲಿಸಿ
ಕತೆಯನು ಓದಲು ಕೊಡುತಿದ್ದೆ
ಜಾತಿ ಮತ ಬಂಧವಿಲ್ಲದ ಹೊಸ
ಲೋಕವ ಅಲ್ಲಿ ಬೆಳೆಸ್ತಿದ್ದೆ
ಎಲ್ಲರ ಸೇರಿಸಿ ನಿನ್ನೊಜತೆ ನಾನೂ
ಬೆಳದಿಂಗಳ ಊಟ ಮಾಡ್ತಿದ್ದೆ! ■

# ಮಳೆ ಬಂತು ಮಳೆ

■ ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

ಗುಡುಗು ಸಿಡಿಲು ಮಿಂಚು ಮಿಂಚಿ
ಮೋಡ ಮಳೆಯ ಸುರಸಿತು
ಬಿಸಿಲಿನಿಂದ ಬಾಯಿ ಬಿಟ್ಟ
ಭೂಮಿ ದಾಹ ತಣಿಯಿತು.

ಸುತ್ತ ಮುತ್ತಲಿದ್ದ ಹಳ್ಳ
ಕೊಳ್ಳ ತುಂಬಿ ಹರಿಯಿತು
ಮಡ್ಡಿ ಗುಡ್ಡ ಹಸಿರ ಕಂಡು
ಪ್ರಾಣಿ ಪಕ್ಷಿ ನಲಿಯಿತು.

ಗಿಡಮರಗಳ ಹಸುರಿನಲ್ಲಿ
ಹೂವು ಹಣ್ಣು ಮೊಳೆಯಿತು
ಹಕ್ಕಿ ಪಕ್ಕಿ ಮೊಗದಿ ನಗುವ
ಉಕ್ಕಿ ಉಕ್ಕಿ ಹರಿಯಿತು.

ರಂಟೆ ಕುಂಟೆ ಹೊತ್ತು ರೈತ
ಹೊಲದ ಹಾದಿ ಹಿಡಿದರು
ಉತ್ತಿ ಬಿತ್ತಿ ಬೆಳೆಯ ಬೆಳೆವ
ಭಾವ ಮನದಿ ತಳೆದರು.

ಧೋ ಎಂದು ಸುರಿವ ಮಳೆಯಲಿ
ಚಿಣ್ಣರೆಲ್ಲಾ ನಲಿದರು
ಅನ್ನದಾತ ಶುಭವ ಕೋರಿ
ಮಳೆರಾಯನ ನೆನೆದರು. ■

